**ಅಸಲು ದಾವಾ ಸಂಖ್ಯೆ:-29/2015** **ಪಿ.ಡಬ್ಲ್ಯೂ:- 1**

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ **02-04-2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ:- ವಾದಿ ಪರ ವಕೀಲರಿಂದ:-

ಗ್ರಾಮೀಣ ಅಭಿವೃದ್ದಿ ಮತ್ತು ಪಂಚಾಯಿತಿರಾಜ್ ಇಲಾಖೆಯವರು ನೀಡಿದ ನಮೂನೆ -3 ರ ದೃಢೀಕೃತ ನಕಲುಗಳನ್ನು ಹಾಜರುಪಡಿಸುತ್ತಿದ್ದು ಅದನ್ನು ನಿಪಿ.10 ಮತ್ತು 11 ಎಂದು ಗುರುತಿಸಲಾಯಿತು.

ಪ್ರತಿವಾದಿ 3 ರಿಂದ 6 ರವರು ಪ್ರತಿವಾದ ಪತ್ರ ಸಲ್ಲಿಸದೇ ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ 2 ನೇ ಪ್ರತಿವಾದಿಯ ಪರ ವಕೀಲರಿಂದಃ

ನಿಪಿ-10 ಮತ್ತು 11 ದಾಖಲೆಗಳನ್ನು ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ನಮ್ದು ವಕೀಲರಿಗೆ ಕೊಟ್ಟಿದ್ದೆನು. ನಾವು ವಕೀರಿಗೆ ಕೊಟ್ಟ ದಾಖಲೆಗಳ ಆಧಾರದ ಮೇಲೆ ನಮ್ಮ ವಕೀಲರು ಪ್ರಸ್ತುತ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಆಸ್ತಿ ನಂ.55 ಮತ್ತು 85 ಅಲ್ಲ ಆಸ್ತಿ ನಂ.55/1 ಮತ್ತು 56/2 ಎಂಬ ವಿಚಾರ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿಯು ಗ್ರಾಮ ಪಂಚಾಯಿತಿಯಲ್ಲಿ ದಾಖಲೆಗಳನ್ನು ತೆಗೆಸಿದಾಗ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾಖಲೆಗಳನ್ನು ಪಂಚಾಯಿತಿಯಿಂದ ಪಡೆದುಕೊಂಡು ನಮ್ಮ ವಕೀಲರಿಗೆ ಕೊಟ್ಟಿದ್ದೆವು ಮತ್ತು ಈಗ ನಿಪಿ-10 ಮತ್ತು 11 ದಾಖಲೆಗಳನ್ನು ಪುನಃ ಪಡೆದುಕೊಂಡು ನಮ್ಮ ವಕೀಲರಿಗೆ ಕೊಟ್ಟಿದ್ದೆವು ಎಂದು

ನುಡಿಯುತ್ತಾರೆ. ನನಗೆ ನಿಪಿ-10 ಮತ್ತು 11 ದಾಖಲೆಗಳ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿದ್ದು ಆ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.